ಖಳನಾಗಿಸಬಲ್ಲ ದೃಢವಾದ ಆಧಾರಗಳು ದೊರೆಯದೇ, ಆ ಯತ್ನವನ್ನು ಕೈಬಿಡಬೇಕಾಯಿತು! ಇದರ ಸುಳಿವು ಸಿಕ್ಕ ಪತ್ರಕರ್ತ ಗ್ಯಾರಿ ಟಾಬ್ಸ್ ಆ ಕಡತಗಳನ್ನೆಲ್ಲ ಪಡೆದು ವಿಶ್ಲೇಷಿಸಿದರು; ಕೊಬ್ಬನ್ನು ವಿನಾ ಕಾರಣ ದೂಷಿಸಿ, ಸಕ್ಕರೆಯ ಮಾರಾಟವನ್ನು ಪೋಷಿಸಿದ್ದಕ್ಕೆ ಆಹಾರೋದ್ಯಮದ ಕುತಂತ್ರಗಳೇ ಕಾರಣವೆಂದು ಪ್ರತಿಷ್ಠಿತ 'ಸೈನ್ಸ್' ವಿದ್ವತ್ಪತ್ರಿಕೆಯಲ್ಲಿ ಬಯಲುಗೊಳಿಸಿದರು. [Science. 2001; 291(5513):2536]

ಆದರೆ, ಆಧುನಿಕ ರೋಗಗಳಿಗೆ ಸಕ್ಕರೆಯ ಅತಿ ಸೇವನೆಯೇ ಕಾರಣವೆಂದ ಇನ್ನಷ್ಟು ವರದಿಗಳನ್ನು ಮುಚ್ಚಿ ಹಾಕುವುದು ಮುಂದುವರಿಯಿತು. ವಿಶ್ವ ಆರೋಗ್ಯ ಸಂಸ್ಥೆಯು 2003ರಲ್ಲಿ ಪ್ರಕಟಿಸಿದ 916ನೇ ತಾಂತ್ರಿಕ ವರದಿಯು ಬೊಜ್ಜಿನಂತಹ ಕಾಯಿಲೆಗಳ ಹೆಚ್ಚಳಕ್ಕೆ ಸಕ್ಕರೆಯುಕ್ತ ಪೇಯಗಳು ಮತ್ತು ತಿನಿಸುಗಳ ಅತಿಸೇವನೆಯೇ ಕಾರಣವೆಂದು ಸ್ಪಷ್ಟವಾಗಿ ದೂರಿತು. ಆದರೆ ಅಮೆರಿಕದ ಸಕ್ಕರೆ ಸಂಘ, ಲಘು ಪೇಯ ಸಂಘ, ಹಾಗೂ ಆಗಿನ ಅಧ್ಯಕ್ಷ ಬುಷ್ ಆಡಳಿತ ಇದನ್ನು ವಿರೋಧಿಸಿ, ವಿಶ್ವ ಆರೋಗ್ಯ ಸಂಸ್ಥೆಗೆ ಅಮೆರಿಕದ 40 ಕೋಟಿ ಡಾಲರ್ ವಾರ್ಷಿಕ ನೆರವನ್ನು ನಿಲ್ಲಿಸುವ ಬೆದರಿಕೆಯೊಡ್ಡಿ, ಆ ವರದಿಯನ್ನು ಮೂಲೆಗೆ ತಳ್ಳುವಲ್ಲಿ ಸಫಲವಾದವು.

2015ರ ಫೆಬ್ರುವರಿಯಲ್ಲಿ ಪ್ರಕಟವಾದ ಅಮೆರಿಕ ಸರಕಾರದ ಆಹಾರ ಮಾರ್ಗದರ್ಶಿಯ ಸಲಹಾ ಸಮಿತಿಯ ವರದಿಯಲ್ಲೂ 'ಕೊಲೆಸ್ಟರಾಲ್‌ನಿಂದ ಯಾವ ತೊಂದರೆಯೂ ಇಲ್ಲ, ಬದಲಿಗೆ ಸಕ್ಕರೆಯ ಸೇವನೆಯಿಂದಲೇ ಹೊಸ ರೋಗಗಳು ಹೆಚ್ಚುತ್ತಿವೆ' ಎಂದು ಹೇಳಲಾಯಿತು. ಆದರೆ ಮಾರ್ಗದರ್ಶಿಯು ಹೊರಬಂದಾಗ ಮತ್ತದೇ ಕೊಬ್ಬು ದೂಷಣೆ, ಸಕ್ಕರೆ ಪೋಷಣೆಯ ಹಳೆ ರಾಗವೇ ಮುಂದುವರಿಯಿತು!





